# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5077/2023

ಪ್ರಾ ಸಾ 2 ಚಾ ಸಾ 3

ಹೆಸರುಃ ಹರ್ಷಿಣಿ

ತಂದೆಯ ಹೆಸರುಃ ಪ್ರಮೋದ್

ವಯಸ್ಸುಃ 20 ವರ್ಷ

ಉದ್ಯೋಗಃ ಗೃಹಿಣಿ

ವಾಸಃ ಮೈಸೂರು .

ಸಾಕ್ಷಿಯನ್ನು ದಿಃ 20.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ಮೃತ ಜಯಕುಮಾರ್ ನನ್ನ ತಂದೆ ಮತ್ತು ಸುಧಾಮಣಿ ನನ್ನ ತಾಯಿ. ನಮ್ಮ ತಂದೆ ತಾಯಿಗೆ ನಾನು ಮತ್ತು ಮೊನಿಕಾ ಎಂಬಿಬ್ಬರು ಮಕ್ಕಳು.

2. ನನ್ನ ತಂದೆ ಜಯಕುಮಾರ್ ಅವರು ಪಾಂಡವಪುರದಲ್ಲಿ ಕೃಷಿ ಔಷಧಿ ಕೇಂದ್ರುವನ್ನು ಇಟ್ಟುಕೊಂಡಿದ್ದರು . ನಾವು ಪಾಂಡವಪುರದ ಟಿ ಎಸ್ ಛತ್ರದಲ್ಲಿ ವಾಸವಿದ್ದೆವು. ಪ್ರತಿದಿನ ನನ್ನ ತಂದೆ ಟಿ ವಿ ಎಸ್ ಎಕ್ಸೆಲ್ ನಲ್ಲಿ ಟಿ ಎಸ್ ಛತ್ರದ ನಮ್ಮ ಮನೆಯಿಂದ

ಪಾಂಡವಪುರ ಅಂಗಡಿಗೆ ಹೋಗಿ ಬಂದು ಮಾಡುತ್ತಿದ್ದರು.

3. ಸಾಮಾನ್ಯ ವಾಗಿ ಅವರು ಬೆಳಗ್ಗೆ 8.30 ಗಂಟೆಗೆ ಮನೆಯಿಂದ ಹೊರಟು ರಾತ್ರಿ 8.30-9.00 ಗಂಟೆಗೆ ಮನೆಗೆ ತಲುಪುತ್ತಿದ್ದರು.

4. ನ್ಯಾಯಾಲಯದ ಮುಂದಿರುವ 1ನೇ ಆರೋಪಿ ವಾಸುದೇವ ನನ್ನ ತಂದೆಯ ತಮ್ಮ. ಆಸ್ತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ತಂದೆ ಮತ್ತು ಚಿಕ್ಕಪ್ಪ ವಾಸುದೇವ ರವರ ನಡುವೆ ವಿವಾದ ಇತ್ತು. ಅದೇನೆಂದರೆ ನಮ್ಮ ಮನೆಯ ನಡುವೆ ಒಂದು ಕಾಮನ್ ವಾಲ್ ಇತ್ತು, ಆ ಕಾರಣಕ್ಕಾಗಿ ವಿವಾದ ಇತ್ತು. ಮನೆಯ ಹೊರಭಾಗದಲ್ಲಿ ಒಂದು ಬೋರ್ ವೆಲ್ ಇತ್ತು , ಅದು ವಿಭಾಗದಲ್ಲಿ ನನ್ನ ತಂದೆಯ ಹಿಸ್ಸೆಗೆ ಬಂದಿತ್ತು. ಆ ರೀತಿ ಬೋರ್ ವೆಲ್ ನನ್ನ ತಂದೆಯ ಭಾಗಕ್ಕೆ ಬಂದಿದೆ ಎಂಬ ಕಾರಣಕ್ಕೆ ನನ್ನ ಚಿಕ್ಕಪ್ಪ ಆಗಾಗ ಗಲಾಟೆ ಮಾಡುತ್ತಿದ್ದರು.

5. ಆ ರೀತಿ ಒಂದು ಸಲ ಗಲಾಟೆ ಮಾಡಿದಾಗ ನನ್ನ ತಂದೆ ಮತ್ತು ತಾಯಿ ಪಾಂಡವಪುರದ ಪೊಲೀಸರಿಗೆ ನನ್ನ ಚಿಕ್ಕಪ್ಪನ ವಿರುದ್ಧ ದೂರು ಕೊಟ್ಟಿದ್ದರು. ಒಂದು ಸಲ ನನ್ನ ಚಿಕ್ಕಪ್ಪ ಕೋಲಿನಿಂದ ನನ್ನ ತಂದೆಯ ತಲೆಗೆ ಹೊಡೆದಿದ್ದರು , ಆಗ ರಕ್ತಗಾಯವಾಗಿತ್ತು ಮತ್ತು ಈ ಸಂಬಂಧವಾಗಿ ನನ್ನ ತಂದೆ ಪಾಂಡವಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದರು.

6. ದಿಃ 7.7.2013 ರಂದು ಬೆಳಗ್ಗೆ 8 ಗಂಟೆಗೆ ನಾನು ನನ್ನ ತಂದೆಯ ಜೊತೆಯಲ್ಲಿ ಟಿವಿಎಸ್ ಎಕ್ಸೆಲ್ ನಲ್ಲಿ

ಪಾಂಡವಪುರದ ಕೃಷಿ ಕೀಟನಾಶಕ ಔಷಧಿ ಅಂಗಡಿಗೆ ಹೋಗಿದ್ದೆ. ನಮ್ಮ ಅಂಗಡಿಯನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿತ್ತು , ಆಗ ಔಷದಿಗಳನ್ನು ಸ್ಥಳಾಂತರಿಸಲು ಮತ್ತು ಜೋಡಿಸಲು ನಾನು ನನ್ನ ತಂದೆಯ ಜೊತೆಯಲ್ಲಿ ಪಾಂಡವಪುರದ ನಮ್ಮ ಅಂಗಡಿಗೆ ಹೋಗಿದ್ದೆ.

7. ರಾತ್ರಿ 8.30 ಗಂಟೆಗೆ ನಾನು ಮತ್ತು ನನ್ನ ತಂದೆ ಟಿ ವಿ ಎಸ್ ಎಕ್ಸೆಲ್ ನಲ್ಲಿ ಮನೆಗೆ ಹೊರಟಾಗ ನನ್ನ ಚಿಕ್ಕಪ್ಪ ವಾಸುದೇವ ಔಷಧಿ ಅಂಗಡಿಯಿಂದ ಸ್ವಲ್ಪ ದೂರದಲ್ಲಿ ಕಾರಿನ ಮುಂಭಾಗದಲ್ಲಿ ಕುಳಿತಿದ್ದರು. ಕಾರಿನ ಹಿಂಭಾಗದಲ್ಲಿ ಇನ್ನು ಕೆಲವರು ಇದ್ದರು.

8. ನಾನು ಮತ್ತು ನನ್ನ ತಂದೆ ಟಿ ವಿ ಎಸ್ ಎಕ್ಸೆಲ್ ನಲ್ಲಿ ಟಿ ಎಸ್ ಛತ್ರದ ನಮ್ಮ ಮನೆಗೆ ಬರುತ್ತಿದ್ದಾಗ ಕಾರು ನಮ್ಮನ್ನು ಹಿಂಬಾಲಿಸುತ್ತಿತ್ತು , ನಾನು ಎರಡು ಸಲ ತಿರುಗಿ ನೋಡಿದೆ , ಆ ಕಾರಿನಲ್ಲಿ ನನ್ನ ಚಿಕ್ಕಪ್ಪ ಕುಳಿತಿದ್ದರು. ಅದು ಬಿಳಿಯ ಬಣ್ಣದ ಕ್ವಾಲಿಸ್ ಕಾರು ಆಗಿತ್ತು.

9. ಆ ರೀತಿ ನಾವು ಕೆ ಎಂ ಹೊಸೂರುನ ಆಲೆಮನೆಯ ಬಳಿ ಬಂದಾಗ ಜೋರಾಗಿ ಬಂದ ನನ್ನ ಚಿಕ್ಕಪ್ಪ ಕುಳಿತಿದ್ದ ಕಾರು ನನ್ನ ತಂದೆಯ ಟಿ ವಿ ಎಸ್ ಎಕ್ಸೆಲ್ ಗೆ ಹಿಂಭಾಗದಿಂದ ಡಿಕ್ಕಿ ಪಡಿಸಿತು.

10. ಆ ರೀತಿ ಡಿಕ್ಕಿ ಪಡಿಸಿದಾಗ ನಾನು ಬೈಕಿನಿಂದ ಕೆಳಗೆ ಬಿದ್ದು ಉರುಳಿ ರಸ್ತೆಯ ಪಕ್ಕಕ್ಕೆ ಬಿದ್ದೆ. ನನ್ನ ತಂದೆ ಚಲಾಯಿಸುತ್ತಿದ್ದ ಗಾಡಿ ಸ್ವಲ್ಪ ದೂರದಲ್ಲಿ ಬಿದ್ದಿತ್ತು.

ನನ್ನ ತಂದೆ ನನಗೆ ಕಾಣಿಸುತ್ತಿರಲಿಲ್ಲ. ನನ್ನ ಕೈ , ಕಣ್ಣು , ಕಾಲು ಮತ್ತು ಮೂಗಿಗೆ ಸ್ವಲ್ಪ ಏಟಾಗಿತ್ತು , ನಾನು ಸ್ವಲ್ಪ ಜ್ಞಾನ ತಪ್ಪಿದ್ದೆ. ರಸ್ತೆಯಲ್ಲಿ ಹೋಗುವವರು ನನ್ನನ್ನು ಕರೆದುಕೊಂಡು ಮನೆಗೆ ಹೋದರು. ನನ್ನ ತಂದೆ ಏನಾದರು ಎಂದು ಆಗ ನನಗೆ ಗೊತ್ತಾಗಲಿಲ್ಲ.

11. ಮನೆಯಿಂದ ನನ್ನನ್ನು ಪಾಂಡವಪುರದ ಆಸ್ಪತ್ರೆಗೆ ನನ್ನ ದೊಡ್ಡಮ್ಮ ಕರೆದುಕೊಂಡು ಬಂದಿದ್ದರು , ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ನನ್ನನ್ನು ಮೈಸೂರಿನ ಎಂ ಹೆಚ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ.

12. ನನ್ನ ತಂದೆಯ ತಲೆ ಮತ್ತು ಕಾಲಿಗೆ ಏಟಾಗಿದೆ ಮತ್ತು ಅವರು ಮೃತಪಟ್ಟಿದ್ದಾರೆ ಎಂಬ ವಿಚಾರ ಮೈಸೂರಿನ ಆಸ್ಪತ್ರೆಯಲ್ಲಿದ್ದಾಗ ನನಗೆ ಗೊತ್ತಾಯಿತು.

13. ನನ್ನ ತಂದೆ ಸತ್ತಿದ್ದರಿಂದ ನಾನು ಗಾಬರಿಯಲ್ಲಿದ್ದೆ , ಎಲ್ಲವನ್ನೂ ತಿಳಿಸಲಾಗಲಿಲ್ಲ , ಆನಂತರದಲ್ಲಿ ನನ್ನ ತಂದೆಯನ್ನು  ಚಿಕ್ಕಪ್ಪ ಅಪಘಾತ ಮಾಡಿ ಸಾಯಿಸಿದ್ದಾರೆ ಎಂಬ ವಿಚಾರವು ಗೊತ್ತಾಯಿತು.

14. ಘಟನೆ ನಡೆದ ಮಾರನೇ ದಿವಸಕ್ಕೆ ನನ್ನನ್ನು ಪೊಲೀಸರು ಠಾಣೆಗೆ ಕರೆದಿದ್ದಾರೆ , ನಾನು ಹೋಗಿದ್ದೇನೆ ಮತ್ತು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಅದಾದ ಮೂರು ವರೆ ತಿಂಗಳಿನ ನಂತರ ಮತ್ತೊಂದು ಸಲ ಪೊಲೀಸರು ನನ್ನನ್ನು ಠಾಣೆಗೆ ಕರೆದಾಗ ನಾನು ಹೋಗಿದ್ದೇನೆ. ಅಲ್ಲಿ ಕ್ವಾಲಿಸ್ ಕಾರು ಇತ್ತು , ಅದನ್ನು ನಾನು ನೋಡಿಕೊಂಡು ಆ ಕಾರು ನನ್ನ ತಂದೆಯ ಟಿ ವಿ ಎಸ್ ಎಕ್ಸೆಲ್ ಗೆ ಡಿಕ್ಕಿಪಡಿಸಿದ ಕಾರು ಎಂದು ಗುರುತಿಸಿದ್ದೇನೆ.

ಆ ಕಾರು ನನ್ನ ಚಿಕ್ಕಪ್ಪ ಕುಳಿತಿದ್ದ ಕಾರು ಆಗಿತ್ತು.

15. ನಾನು ಠಾಣೆಯಲ್ಲಿ ನೋಡಿದಾಗ ಆ ದಿವಸ ಕಾರಿನಲ್ಲಿ ಕುಳಿತಿದ್ದ ನನ್ನ ಚಿಕ್ಕಪ್ಪ ವಾಸುದೇವ್ ಮತ್ತು ಇತರೇ ನಾಲ್ಕು ಜನರು ಇದ್ದರು. ಆ ನಾಲ್ಕು ಜನರ ಹೆಸರು ಹೊಸಕೋಟೆ ನಾಗೇಶ , ಶೆಟ್ಟಹಳ್ಳಿಯ ನಾಗೇಶ , ಚಂದ್ರಶೇಖರ ಮತ್ತು ದಿನೇಶ ಎಂದು ಗೊತ್ತಾಯಿತು. ಅವರುಗಳ ಪೈಕಿ ಆರೋಪಿ ದಿನೇಶ ಈ ದಿವಸ ನ್ಯಾಯಾಲಯದಲ್ಲಿ ಇದ್ದಾನೆ.

16. ನನ್ನ ಚಿಕ್ಕಪ್ಪ ವಾಸುದೇವ, ಹೊಸಕೋಟೆ ನಾಗೇಶ, ಇನ್ನೊಬ್ಬ ನಾಗೇಶ ಮತ್ತು ಚಂದ್ರಶೇಖರನನ್ನು ನೋಡಿದರೆ ಗುರುತಿಸುತ್ತೇನೆ.

17. ಈಗ ನೋಡಿದ ನಿಪಿ 1 ಫೋಟೋದಲ್ಲಿ ಕಂಡುಬರುವ ಮೊಪೆಡ್ ಆ ದಿವಸ ನಾನು ಮತ್ತು ನನ್ನ ತಂದೆ ಮನೆಗೆ ಬರುತ್ತಿದ್ದ ಮೊಪೆಡ್ ಆಗಿದೆ.

18. ನಿಪಿ 2ರ 2 ಫೋಟೋಗಳು ಗಾಯಗೊಂಡ ನನಗೆ ಸಂಬಂಧಪಟ್ಟ ಫೋಟೋಗಳಾಗಿವೆ.

19.ನಿಪಿ3 ರ ಫೋಟೋಗಳು ನನ್ನ ತಂದೆಯ ಶವಕ್ಕೆ ಸಂಬಂಧಪಟ್ಟವುಗಳಾಗಿವೆ.

20. ಈಗ ನೋಡಿದ 4 ಫೋಟೋಗಳ ದೃಢೀಕೃತ ನಕಲು ಆ ದಿವಸ ನಮಗೆ ಡಿಕ್ಕಿ ಪಡಿಸಿದ ಕ್ವಾಲಿಸ್ ಕಾರಿನ ಫೋಟೋಗಳಾಗಿವೆ. ಸದರಿ 4 ಫೋಟೋಗಳ ದೃಢೀಕೃತ ನಕಲುಗಳನ್ನು ನಿಪಿ 4 ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)